ಓ:ಎಸ್:ನಂ.150/2014

ಪಿ.ಡಬ್ಲ್ಯೂ- 2

*<u>ದಿಃ 16-08-2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>*

*<u>ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಕೆ ಎಲ್ ಆರ್ ವಕೀಲರಿಂದ</u>*

ದಾವ ಸ್ವತ್ತಿನ ಅಕ್ಕಪಕ್ಕದಲ್ಲಿ ನನಗೆ ಸೇರಿದ ಯಾವುದೇ ಜಮೀನು ಇರುವುದಿಲ್ಲ. ದಾವ ಸರ್ವೆ ನಂಬರ್ *10-12* ವರ್ಷಗಳ ಹಿಂದೆ ದುರಸ್ತಿ ಆಗಿದೆ. ಈ ದಾವಾ ಸಲ್ಲಿಸಲು ಪ್ರತಿವಾದಿಗಳ ವಿಳಾಸವನ್ನು ವಾದಿಯೇ ನೀಡಿರುತ್ತಾರೆ. ದಾವ ಸರ್ವೆ ನಂಬರ್ ಹದ್ದುಬಸ್ತು ಮಾಡುವ ಸಮಯದಲ್ಲಿ ಪ್ರತಿವಾದಿಗಳಿಗೆ ನೀಡಿರುವ ನೋಟೀಸನ್ನು ನಾವು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇವೆ. ನಾನು ಬಿ.ಸಿ.ರುದ್ರಮೂರ್ತಿಯವರ ಬಳಿ ವ್ಯವಸಾಯ ಮಾಡುತ್ತಿದ್ದೆ ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲಾತಿಯನ್ನು ಸಲ್ಲಿಸಿದ್ದೇನೆ. ದಾವ ಸ್ವತ್ತು ಖಾಲಿ ಜಮೀನು ಎಂದರೆ ಸರಿ. ದಾವ ಆಸ್ತಿಯಲ್ಲಿ ಯಾರು ಮಣ್ಣನ್ನು ಹಾಕಿರುತ್ತಾರೆಂದರೆ ಸಾಕ್ಷಿ ಪ್ರತಿವಾದಿಗಳು ಹಾಕಿರುತ್ತಾರೆಂದು ನುಡಿಯುತ್ತಾರೆ. ದಾವ ಆಸ್ತಿಯಲ್ಲಿ ರಸ್ತೆ ನಿರ್ಮಾಣ ಮಾಡಲು ಪಂಚಾಯಿತಿಯವರು ಫಂಡ್ ಹಾಕಿರುತ್ತಾರೆಂದರೆ ಸರಿಯಲ್ಲ. ದಾವ ಆಸ್ತಿಯಲ್ಲಿ ಯಾರು ಮಣ್ಣನ್ನು ಹೊಡೆಸಿರುತ್ತಾರೆಂದು ನಾನು ಪ್ರತ್ಯಕ್ಷವಾಗಿ ನೋಡಿರುವುದಿಲ್ಲ. ಸುಮಾರು ನಾಲ್ಕು ವರ್ಷಗಳ ಹಿಂದೆ ಮಣ್ಣನ್ನು ಹೊಡೆಸಿರುತ್ತಾರೆ. ದಾವ ಆಸ್ತಿಯಲ್ಲಿ ಯಾವ ವರ್ಷದಂದು ಬೇಲಿ ಹಾಕಿದ್ದಾರೆಂದರೆ ನನಗೆ ಗೊತ್ತಿಲ್ಲ. ಸದರಿ ವಿಚಾರವಾಗಿ ರಾಜಸ್ವ ನಿರೀಕ್ಷಕರು, ತಹಶೀಲ್ದಾರ್ ರವರು ಸ್ಥಳ ಪರಿಶೀಲನೆಗಾಗಿ ಬಂದಿರುತ್ತಾರೆಂದರೆ ಸರಿಯಲ್ಲ. ಸದರಿ ದಾವೆಯನ್ನು ಹೂಡುವುದಕ್ಕಿಂತ ಮುಂಚೆ ಪ್ರತಿವಾದಿಗಳು ಕಂದಾಯ ಅಧಿಕಾರಿಗಳಿಗೆ ಒಂದು ನೋಟೀಸನ್ನು ಜಾರಿ ಮಾಡಿರುತ್ತಾರೆಂದರೆ ಸರಿ. ಸದರಿ ವಿಚಾರವಾಗಿ ಕಂದಾಯ ಅಧಿಕಾರಿಗಳು ನನಗೂ ಮತ್ತು ನನ್ನ ಅಳಿಯನಿಗೂ ನೋಟೀಸನ್ನು ಜಾರಿ ಮಾಡಿರುತ್ತಾರೆಂದರೆ ಸರಿಯಲ್ಲ. ವಾದಿಯರ ಮತ್ತು ಪ್ರತಿವಾದಿಗಳ ನಡುವೆ ಎ ಸಿ ನ್ಯಾಯಾಲಯದಲ್ಲಿ ಯಾವುದೇ ಪ್ರಕರಣ ನಡೆದಿರುವುದಿಲ್ಲ. ನಾವು ಎ ಸಿ ನ್ಯಾಯಾಲಯದಲ್ಲಿ ವಕೀಲರನ್ನು ನೇಮಕ ಮಾಡಿಕೊಂಡಿದ್ದೇವು ಎಂದರೆ ಸರಿ. ಎ ಸಿ ನ್ಯಾಯಾಲಯದಿಂದ ನೋಟೀಸು ಜಾರಿಯಾದ ನಂತರ ನಾವು ನಮ್ಮ ವಕೀಲರನ್ನು ನೇಮಕ ಮಾಡಿಕೊಂಡಿದ್ದೆವು ಎಂದರೆ ಸರಿ. ಕಂದಾಯ ಅಧಿಕಾರಿಗಳು ಸ್ಥಳಕ್ಕೆ ಬಂದು ಮಣ್ಣು ಹಾಕಿರುವ ರಸ್ತೆಯ ಬಗ್ಗೆ ನಕ್ಷೆಯನ್ನು ತಯಾರು ಮಾಡಿರುತ್ತಾರೆಂದರೆ ನನಗೆ ಗೊತ್ತಿಲ್ಲ. ದಾವ ಸ್ವತ್ತಿನಲ್ಲಿ ಇರುವ ರಸ್ತೆಯನ್ನು ಪಂಚಾಯಿತಿಯವರು ಇಂದ್ರಾ ಅವಾಜ್ ಅಡಿಯಲ್ಲಿ ರಸ್ತೆಯನ್ನು ನಿರ್ಮಾಣ ಮಾಡಿರುವ ಬಗ್ಗೆ ಪ್ರತಿವಾದಿಗಳು

ನ್ಯಾಯಾಲಯಕ್ಕೆ ದಾಖಲಾತಿಗಳನ್ನು ಸಲ್ಲಿಸಿದ್ದು, ಸದರಿ ದಾಖಲಾತಿಗಳನ್ನು ತಾವೇನಾದರೂ ನೋಡಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ನಾವು ಮೋಜಣಿ ಅಧಿಕಾರಿಗಳು ಹಾಗೂ ಕಂದಾಯ ಅಧಿಕಾರಿಗಳ ವಿರುದ್ದ ಯಾವುದೇ ಕಾನೂನು ಕ್ರಮ ಕೈಗೊಂಡಿರುವುದಿಲ್ಲ. ಬುಕ್ಕಾಂಬುದಿಯ ಅಕ್ಕಪಕ್ಕದ ಗ್ರಾಮದ ವಾಸಿಗಳು ನನಗೆ ಗೊತ್ತಿಲ್ಲ. ಈ ದಾವೆಯ ಪ್ರತಿವಾದಿಗಳು ನನಗೆ ಪರಿಚಯವಿರುತ್ತಾರೆ. ಅವರು ಕಣಾಬಗಟ್ಟೆ ಗ್ರಾಮದ ವಾಸಿಗಳು. ನನ್ನ ಅಳಿಯನಾದ ಈ ದಾವೆಯ ವಾದಿಯು ಹೊಗರೆಹಳ್ಳಿ ಗ್ರಾಮದ ವಾಸಿ. ಹೊಗರೆಹಳ್ಳಿಗೂ ಮತ್ತು ದಾವ ಆಸ್ತಿಯ ನಡುವೆ ಸುಮಾರು *50* ಕಿಲೋ ಮೀಟರ್ ಅಂತರವಿದೆ. ನಾನು ಈ ದಾವೆಯ ಪ್ರತಿವಾದಿಗಳ ವಿರುದ್ದ ಪೊಲೀಸ್ ದೂರನ್ನು ದಾಖಲು ಮಾಡಿದ್ದೆ  ಎಂದರೆ ಸರಿ. ಸದರಿ ಪ್ರಕರಣದಲ್ಲಿ ಪ್ರತಿವಾದಿಗಳು ದೋಷಮುಕ್ತರಾಗಿದ್ದಾರೆಂದರೆ ಸರಿ. ಸದರಿ ಪ್ರಕರಣದಲ್ಲಿ ಪೊಲೀಸರು ಯಾವ ಮುದ್ದೆ ಮಾಲನ್ನು ಅಮಾನತ್ತುಪಡಿಸಿಕೊಂಡಿದ್ದಾರೆ ಎಂಬುದರ ಬಗ್ಗೆ ನಾನು ನ್ಯಾಯಾಲಯಕ್ಕೆ ದಾಖಲಾತಿಗಳನ್ನು ಹಾಜರುಪಡಿಸಿದ್ದೇನೆ. ನಮಗೆ ಸೇರಿದ ಜಮೀನಿನಲ್ಲಿ ಟಿಸಿ ಅಳವಡಿಸಿದ್ದಾರೆಂದರೆ ಸರಿ. ಸರ್ವೆ ನಂಬರ್ *23/2* ರ ಉತ್ತರ ಭಾಗದ ಅಂಚಿನಲ್ಲಿ ಪ್ರತಿವಾದಿಗಳಿಗೆ ಜಮೀನಿಗೆ ಹೋಗಲು ಒಂದು ರೂಢಿ ದಾರಿ ಇದ್ದು, ಸದರಿ ಜಮೀನಿಗೆ ಪಂಚಾಯಿತಿಯವರು ಮಣ್ಣನ್ನು ಹೊಡೆಸಿದ್ದಾರೆಂದರೆ ಸರಿಯಲ್ಲ. ಈ ದಾವೆಯಲ್ಲಿ ವಾಸ್ತಾಂಶಗಳನ್ನು ಮುಚ್ಚಿಟ್ಟು ನಾನು ವಾದಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಪ್ರತಿವಾದಿಗಳಿಗೆ ಹಾಗೂ ಊರಿನ ಇತರ ಜನರಿಗೆ ತಮ್ಮ ಜಮೀನುಗಳಿಗೆ ಹೋಗಲು ಸರ್ವೆ ನಂಬರ್ *23/2* ರ ಉತ್ತರ ಭಾಗದಲ್ಲಿರುವ ರೂಢಿ ದಾರಿಯನ್ನು ಹೊರತುಪಡಿಸಿ ಬೇರೆ ಯಾವುದೇ ದಾರಿ ಇಲ್ಲ ಎಂದರೆ ಸರಿಯಲ್ಲ. ಸರ್ವೆ ನಂ.*11* ರಿಂದ *19* ಜಮೀನುಗಳು ಕಣಬಗಟ್ಟೆಯ ಗ್ರಾಮಕ್ಕೆ ಸೇರಿದ ಜಮೀನುಗಳು, ಅವರ ಮಾಲೀಕರ ಹೆಸರು ಗೊತ್ತಾ ಎಂದರೆ ಸಾಕ್ಷಿಯು ಕೆಲವೊಂದು ಮಾಲೀಕರ ಹೆಸರು ಗೊತ್ತು ಕೆಲವೊಂದು ಮಾಲೀಕರ ಹೆಸರು ಗೊತ್ತಿಲ್ಲ. ಸರ್ವೆ ನಂ.*23/2* ರ ಅಜುಬಾಜಿನ ಜಮೀನಿನ ಮಾಲೀಕರ ಹೆಸರು ಗೊತ್ತಾ ಎಂದರೆ, ಪಶ್ಚಿಮದ ಕಡೆ ಕರೆಕೋಡಿ ರಸ್ತೆ, ಪೂರ್ವಕ್ಕೆ ಮಹೇಶರವರ ಜಮೀನು, ಉತ್ತರಕ್ಕೆ ಹನುಮಣ್ಣನವರ ಜಮೀನು, ದಕ್ಷಿಣಕ್ಕೆಃ ಪ್ರಸನ್ನರವರ ಜಮೀನು ಇದೆ. ಸರ್ವೆ ನಂ.*17/ಪಿ1* ರಿಂದ *18/4* ರ ಜಮೀನುಗಳು ಯಾವ ಗ್ರಾಮಕ್ಕೆ ಸೇರಿದ್ದು, ಎಂದರೆ ಕಣಬಕಟ್ಟೆ ಗ್ರಾಮಕ್ಕೆ ಸೇರಿದ್ದು, ಅವುಗಳ ಮಾಲೀಕರ ಹೆಸರು ಗೊತ್ತಾ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ಸಾಕ್ಷ್ಯ ನುಡಿಯುತ್ತಾರೆ.

ಮರು ವಿಚಾರಣೆಃ ಇಲ್ಲ

*(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)*

***ಓ. ಕೇ. ಸ. ಇ. ಎ. ಒ.***

Sd/-

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**

***ಪ್ರ.ದ.ನ್ಯಾ.ದಂ.ರವರು,ತರೀಕೆರೆ.***